**ಇಂದು ದಿನಾಂಕ: 31.07.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 1 ನೇ ಪ್ರತಿವಾದಿ ಪರ ಶ್ರೀ.ಹೆಚ್.ಎನ್.ಯು. ವಕೀಲರಿಂದಃ**

ನನ್ನ ತಂದೆ ಆಸ್ತಿಯಲ್ಲಿ ನನಗೆ ಪಾಲು ಬೇಕೆಂದು ಕೇಸು ಹಾಕಿದ್ದೇನೆ. 2 ಎಕರೆ ಆಸ್ತಿಗೆ ಸಂಬಂಧಿಸಿದಂತೆ ಕೇಸು ಹಾಕಿದ್ದೇನೆ. ನನ್ನ ತಂದೆಯ ಹೆಸರು ತಂಗಪ್ಪನ್.ಪಿ.ಕೆ ಮತ್ತು ತಾಯಿಯ ಹೆಸರು ಸುಮತಿ ಅವರಿಬ್ಬರು ಮೂಲತಃ ಕೇರಳ ರಾಜ್ಯದವರು. ನನ್ನ ತಂದೆ ತಾಯಿ ಅಬ್ಬಳತಿ ಗ್ರಾಮದಲ್ಲಿ ವಾಸವಿದ್ದರು ಎಂದು ತೋರಿಸಲು ದಾಖಲೆ ಇದೆ. ನಮ್ಮ ತಂದೆ ತಾಯಿಗೆ 4 ಜನ ಮಕ್ಕಳು. ನಾನು ಮತ್ತು ಪ್ರತಿವಾದಿ 2 ರಿಂದ 5 ರವರು ಅಬ್ಬಳತಿ ಗ್ರಾಮದಲ್ಲಿ ವಾಸವಿದ್ದೇವು ಎಂದು ತೋರಿಸಲು ದಾಖಲೆ ಇದೆ. ನನಗೆ ಮದುವೆಯಾಗಿ 32 ವರ್ಷವಾಗಿದೆ. ನನಗೆ 18 ವರ್ಷ ಇದ್ದಾಗ ಮದುವೆಯಾಗಿದೆ. ಆ ಸಮಯದಲ್ಲಿ ನಾನು ಮತದಾನ ಮಾಡಿರಲಿಲ್ಲ. ತಹಶೀಲ್ದಾರರಿಂದ ವಾಸಸ್ಥಳ ದೃಢೀಕರಣ ಪತ್ರವನ್ನು ಪಡೆದು ಕೊಟ್ಟಿದ್ದೇನೆ. ಕಂದಾಯ ಅಧಿಕಾರಿಗಳಿಂದ ವಂಶವೃಕ್ಷ ಪಡೆದುಕೊಳ್ಳಲು ಪ್ರಯತ್ನಿಸಿಲ್ಲ. ದಾವಾ ಆಸ್ತಿ ನಾವೆಲ್ಲರೂ ಚಿಕ್ಕವರಿದ್ದಾಗ ಕಾಡು ಕಡಿದು ಮಾಡಿರುವ ಜಾಗ. ದಾವಾ ಆಸ್ತಿಯನ್ನು ಸರ್ಕಾರದಿಂದ ನಮ್ಮ ತಂದೆಗೆ ಬಂದಿರುವ ಬಗ್ಗೆ ದಾಖಲೆ ನೋಡಿದ್ದೀರಾ ಎಂದರೆ ಗೊತ್ತಿಲ್ಲ. ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ದಾವಾ ಆಸ್ತಿ ನನ್ನ ತಂದೆಯ ಹೆಸರಿನಲ್ಲಿದ್ದ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ನನ್ನ ತಂದೆಯ ಹೆಸರಿಗೆ 1990 ರಲ್ಲಿ ಖಾತೆಯಾಗಿರಬಹುದು ಅಷ್ಟೊಂದು ನೆನಪಿಲ್ಲ. ಆ ಸಮಯದಲ್ಲಿ ನನ್ನ ತಾಯಿ ಬದುಕಿದ್ದರು. ದಾವಾ ಆಸ್ತಿಯ ಖಾತೆ ನನ್ನ ತಾಯಿಯ ಹೆಸರಿಗೆ ಮಾಡಿಸಿಕೊಂಡಿರಲಿಲ್ಲ. ದಿನಾಂಕ 10.10.2023 ರಂದು 1 ನೇ ಪ್ರತಿವಾದಿಯನ್ನು ಭಾಗ ಕೇಳಿದ್ದೇನೆ. ಯಾರ ಸಮಕ್ಷಮ ಕೇಳಿದ್ದೀರಿ ಎಂದರೆ ನಾವೆ ಹೋಗಿದ್ದೆವು. ನನ್ನ ವಾದ ಪತ್ರದಲ್ಲಿ ಅದೇ ರೀತಿಯಾಗಿ ಬರೆಸಿದ್ದೇನೆ. 1 ನೇ

ಪ್ರತಿವಾದಿ ಖಾತೆ ಮಾಡಿಸಿಕೊಂಡಿರುವ ಬಗ್ಗೆ 2023 ರಲ್ಲಿ ನನಗೆ ಗೊತ್ತಾಗಿದೆ. ನಿರ್ದಿಷ್ಟವಾಗಿ ಯಾವ ದಿನಾಂಕದಂದು ನನಗೆ ಗೊತ್ತಾಗಿದೆ ಎಂದು ನೆನಪಿಲ್ಲ. ದಾವಾ ಆಸ್ತಿ ನನ್ನ ತಂದೆಗೆ ಬಂದಿರುವುದಿಲ್ಲ ಆದರೆ 2 ನೇ ಪ್ರತಿವಾದಿ ಕಾಡು ಕಡಿದು ಮಂಜೂರು ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. ನನ್ನ ತಂದೆ ತಾಯಿ ಅಬ್ಬಳತಿ ಗ್ರಾಮದಲ್ಲಿ ವಾಸವಿರಲಿಲ್ಲ 1 ನೇ ಪ್ರತಿವಾದಿ BSNL ನಲ್ಲಿ ಕೆಲಸ ಮಾಡುತ್ತಾ ಪಿರಿಯಾಪಟ್ಟಣದಲ್ಲಿ ವಾಸವಿದ್ದಾರೆ ಕಾಡು ಕಡಿದು ಮಂಜೂರು ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿರುವ ಆರ್.ಸಿ.ಸಿ ಮನೆಯನ್ನು ನನ್ನ ತಂದೆ ಕಟ್ಟಿಸಿದ್ದರು ಎಂದು ತೋರಿಸಲು ದಾಖಲೆ ಇರುವುದಿಲ್ಲ. ಯಾವ ವರ್ಷದಲ್ಲಿ ನನ್ನ ತಂದೆ ಆರ್ ಸಿಸಿ ಮನೆ ಕಟ್ಟಿದ್ದರು ಎಂದು ನನಗೆ ನೆನಪಿಲ್ಲ. ಕೇಸು ಹಾಕುವ ಕಾಲಕ್ಕೆ ದಾವಾ ಆಸ್ತಿಯಲ್ಲಿರುವ ಮನೆ ನನ್ನ ತಂದೆಯ ಹೆಸರಿನಲ್ಲಿತ್ತು. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ದಾವಾ ಆಸ್ತಿ 1 ನೇ ಪ್ರತಿವಾದಿಗೆ ನೇರವಾಗಿ ಮಂಜೂರಾಗಿದೆ ಎಂದರೆ ಸುಳ್ಳು. 1 ನೇ ಪ್ರತಿವಾದಿಯೇ ಸರ್ಕಾರಕ್ಕೆ ಕಿಮ್ಮತ್ತು ಪಾವತಿಸಿದ್ದಾರೆ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ಹಿಂದೆ ಒಂದು ಹಳೆಯ ಮನೆ ಇತ್ತು ಅದು ಶೀತಿಲವಾಗಿದ್ದರಿಂದ 1 ನೇ ಪ್ರತಿವಾದಿ ಆರ್.ಸಿ.ಸಿ ಮನೆ ಕಟ್ಟಿದ್ದಾರೆ ಎಂದರೆ ನಾವೆಲ್ಲರೂ ಸೇರಿ ಕಟ್ಟಿದ್ದೇವೆ. 1 ನೇ ಪ್ರತಿವಾದಿ ಸಂಬಂಧಪಟ್ಟ ಪಂಚಾಯಿತಿಯಿಂದ ಇ–ಸ್ವತ್ತು ಪಡೆದುಕೊಂಡಿದ್ದಾರೆ ಎಂದರೆ ನೆನಪಿಲ್ಲ. ನಂತರ 1 ನೇ ಪ್ರತಿವಾದಿ ದಿನಾಂಕ 17.03.2017 ರಂದು ತನ್ನ ಮಗನಿಗೆ ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಗನನ್ನು ಈ ಕೇಸಿನಲ್ಲಿ ಸೇರಿಸಿಲ್ಲ. ದಾವಾ ಸ್ವತ್ತಿನ ಮೇಲೆ ಐದು ಲಕ್ಷ ರೂಪಾಯಿ ಬ್ಯಾಂಕ್ ಸಾಲ ಪಡೆದುಕೊಂಡು 1 ನೇ ಪ್ರತಿವಾದಿಯ ಮಗ ಅನುಭವಿಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಸಾಲ ಪಡೆದಿರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಅದೆಲ್ಲ ನೆನಪಿಲ್ಲ. ದಾವಾ ಆಸ್ತಿ 1 ನೇ

ಪ್ರತಿವಾದಿಯ ಸ್ವಯಾರ್ಜಿತವಾಗಿರುವುದರಿಂದ ನನಗೆ ಮತ್ತು ಪ್ರತಿವಾದಿ 2 ರಿಂದ 5 ರವರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ತಂದೆಯ ಹೆಸರಿಗೆ ಯಾವುದೇ ಕಾಲದಲ್ಲಿಯೂ ನಮೂದಾಗಿರಲಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿ 1 ನೇ ಪ್ರತಿವಾದಿಯ ಹೆಸರಿಗೆ ಮಂಜೂರಾಗಿರುವುದರಿಂದ ಇದುವರೆವಿಗೂ ರೆವಿನ್ಯೂ ದಾಖಲೆಗಳು ಅವರ ಹೆಸರಿಗೆ ಬರುತ್ತಿವೆ ಎಂದರೆ ಸರಿಯಲ್ಲ. ನಾನು ಮತ್ತು 2 ರಿಂದ 5 ನೇ ಪ್ರತಿವಾದಿಗಳು ದಾವಾ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**